# ಡಾ.ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ನಲ್ಲಿ ಸತ್ಯ–ಮಿಥ್ಯಗಳ ಮುಖಾಮುಖಿ

ಡಾ. ಮಲ್ಲಿಕಾರ್ಜುನ. ಎಂ.

ಕನ್ನಡದ ವರ್ಡ್ಸ್‌ವರ್ತ್ ಹಾಗೂ ಕನ್ನಡದ ರಸಋಷಿ ಕುವೆಂಪುರವರು ಕನ್ನಡದ ಅಗ್ರಗಣ್ಯ ಕವಿಗಳಾಗಿದ್ದಾರೆ. ಶ್ರೀ ರಾಮಾಯಣ ದರ್ಶನಂ ಎಂಬ ಮಹಾಕಾವ್ಯವನ್ನು ಮಹಾಛಂದಸ್ಸಿನಲ್ಲಿ ಬರೆದು ತಮ್ಮ ಪಾಂಡಿತ್ಯ ಮೆರೆದಿದ್ದಾರೆ. ಈ ಮಹಾಕಾವ್ಯಕ್ಕೆ ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿ, ಮೊದಲ ಪಂಪ ಪ್ರಶಸ್ತಿ, ಮೊದಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೊದಲ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಎಲ್ಲಾ ಪ್ರಶಸ್ತಿಗಳನ್ನು ಮೊದಲಾಗಿ ಪಡೆದ ಶ್ರೇಷ್ಠ ಮಹಾಕಾವ್ಯವಾಗಿದೆ.

ಕುವೆಂಪುರವರ ಕಾವ್ಯಶಕ್ತಿ ಅರಳಿದ್ದು ಮಲೆನಾಡು ಪರಿಸರದಲ್ಲಿ. ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪುರವರು ಬರೆಯದ ಕಾವ್ಯ ಪ್ರಕಾರವಿಲ್ಲ. ಕರ್ನಾಟಕ ಕಂಡ ಶ್ರೇಷ್ಠ ಬರಹಗಾರರಾಗಿದ್ದಾರೆ.

ಹೆಣ್ಣಿಗಾಗಿ ರಾಮಾಯಣ, ಮಣ್ಣಿಗಾಗಿ ಮಹಾಭಾರತ ಭಾರತೀಯ ಸಂದರ್ಭದಲ್ಲಿ ನೋಡಬಹುದು. ಅವರ ಸಾಹಿತ್ಯದಲ್ಲಿ 'ಕರಿಸಿದ್ಧ' ಎಂಬ ಕಥನ ಕವನದಿಂದ ಹಿಡಿದು ರಾಮಾಯಣದಂತಹ ಶ್ರೇಷ್ಠ ಕಾವ್ಯದಲ್ಲಿ ರಾಮನಂತಹ ಮಹಾನ್ ವ್ಯಕ್ತಿಗಳ ಪಾತ್ರಗಳು ಕಂಡು ಬರುತ್ತವೆ. ಶ್ರೀ ರಾಮಾಯಣ ದರ್ಶನಂನಲ್ಲಿ ಮತ್ಸರೆಯ ಮೂಟೆಯಾಗಿದ್ದ ಮಂಥರೆಯ ಪಾತ್ರವು ಮಮತೆಯಲ್ಲಿ ತುಂಬಿದೆ ಹಾಗೂ ರಾಮ ಮತ್ತು ರಾವಣನಂತಹ ಪಾತ್ರಗಳು ಕುವೆಂಪುರವರ ಕೈಯಲ್ಲಿ ವೈಭವೀಕರಣಗೊಳ್ಳದೆ ಸತ್ಯ–ಮಿಥ್ಯಗಳ ಹಿನ್ನಲೆಯಲ್ಲಿ ಚಿತ್ರಿತಗೊಂಡಿವೆ.

ರಾಮಾಯಣ ವಸ್ತುವನ್ನು ಆಧಾರವಾಗಿಟ್ಟುಕೊಂಡು ಭಾರತೀಯ ಸಂದರ್ಭದಲ್ಲಿ ಅನೇಕ ರಾಮಾಯಣಗಳು ರಚನೆಗೊಂಡಿವೆ. ವಾಲ್ಮೀಕಿ ರಾಮಾಯಣ, ಕಂಬ ರಾಮಾಯಣ, ಪೋಲಂಕಿ ರಾಮಮೂರ್ತಿಯವರ ಸೀತಾಯಣ, ನಾಗಚಂದ್ರನ ಪಂಪರಾಮಾಯಣ, ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಮುಂತಾದ ರಾಮಾಯಣಗಳನ್ನು ಗುರುತಿಸಬಹುದು.

ಕುವೆಂಪುರವರ ಶ್ರೀ ರಾಮಾಯಣ ದರ್ಶನಂನಲ್ಲಿ ಇದನ್ನು ಅರ್ಥೈಸಿ ಓದಿದವರಿಗೆ ಜೀವನದ ದರ್ಶನ ಸಿಗುತ್ತದೆ ಎಂದು ಹೇಳಿದ್ದಾರೆ. ಅವರು ತಮ್ಮ ಕೃತಿಯನ್ನು " ಪಾಪಿಗುದ್ಧಾರಮಿಹುದೌ ಸೃಷ್ಟಿಯಮಹದ್‌ವ್ಯೂಹ ರಚನೆಯೊಳ್" ಎಂದು ಕಥೆಯನ್ನು ಆರಂಭಿಸುತ್ತಾರೆ. ಈ ಕಥೆಯಲ್ಲಿ ಬರುವ ರಾಮ,ಸೀತೆ,ರಾವಣ,ಮಂಡೋದರಿ,ಮಂಥರೆ ಯಾರೆ ಆದರೂ ಆ ವಿಧಿಯ ಕೈಯಲ್ಲಿ ಸೂತ್ರದ ಗೊಂಬೆಗಳು. ಮನುಷ್ಯ ಪರಿಸ್ಥಿಯ ಕೈಗೊಂಬೆ ಎಂಬುದನ್ನು ಸಾಬೀತು ಮಾಡಿದ್ದಾರೆ.

*ಇಲ್ಲಿ ಯಾರೂ ಮುಖ್ಯರಲ್ಲ*

*ಇಲ್ಲಿ ಯಾರೂ ಅಮುಖ್ಯರಲ್ಲ*

ಎಂದು ಹೇಳಿ ಹೊಸ ಸಂಸ್ಕೃತಿಯ ಹುಟ್ಟಿಗೆ ಕುವೆಂಪುರವರು ಕಾರಣರಾಗುತ್ತಾರೆ.

ಕುವೆಂಪುರವರು ಶ್ರೀ ರಾಮಾಯಣ ದರ್ಶನಂ ಮಹಾಛಂದಸ್ಸು ಬರೆಯಲು ಸತತ ಒಂಭತ್ತು ವರ್ಷಗಳ ಕಾಲ ಪ್ರಯತ್ನದ ಫಲವಾಗಿ 25000 (ಇಪ್ಪತ್ತೈದು ಸಾವಿರ) ಪಂಕ್ತಿಗಳಿಂದ ಕೂಡಿದ ಮಹಾಕಾವ್ಯರಚಿಸಿದರು.

ಮನುಜಮತ,ವಿಶ್ವಪಥ,ಸರ್ವೋದಯ,ಸಮನ್ವಯ,ಪೂರ್ಣದೃಷ್ಟಿ ಎಂಬ ತತ್ವದ ಮೇಲೆ ಶ್ರೀ ರಾಮಾಯಣ ದರ್ಶನಂ ರಚಿಸಿದರು.

***ಪಿಂತೆ ವಾಲ್ಮೀಕಿಯುಲಿದ ಕಥೆಯಾದೊಡಂ***

***ಕನ್ನಡದಿ ಬೇರೆ ಮೈಯಾತಂತೆ***

***ಮರುವುಟ್ಟವಡದಂತೆ ಮೂಡದೀ ಕಾವ್ಯವಂ***

***ವಿಶ್ವವಾಣಿಗೆ ಮಣಿ ಮಾಡಿಹೆನ್ ನಿಮ್ಮ ಕೃಪೆಯಿಂದ***

( ಎಂದು ತನ್ನ ಗುರುವಾದ ಟಿ.ಎಸ್.ವೆಂಕಣ್ಣಯ್ಯ ನವರಿಗೆ ಈ ಗ್ರಂಥವನ್ನು ಅರ್ಪಿಸಿದ್ದಾರೆ ) ಅಂದರೆ ವಾಲ್ಮೀಕಿಗಿಂತಲೂ ಕುವೆಂಪುರವರು ಭಿನ್ನ ಎಂದು ಹೇಳಬಹುದು.

ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಒಟ್ಟು ನಾಲ್ಕು ಸಂಪುಟಗಳಲ್ಲಿ ರಚನೆಗೊಂಡಿದೆ.1.ಅಯೋಧ್ಯಾ ಸಂಪುಟ, 2.ಕಿಷ್ಕಿಂದಾ ಸಂಪುಟ, 3.ಲಂಕಾ ಸಂಪುಟ, 4.ಶ್ರೀ ಸಂಪುಟ ಎಂಬ ಸಂಪುಟಗಳನ್ನು ರಚಿಸಿ ಕುವೆಂಪುರವರು ತಮ್ಮ ವಿದ್ವತ್ ಪ್ರದರ್ಶಿಸಿದ್ದಾರೆ. ಕುವೆಂಪುರವರ ಜೀವನದಲ್ಲಿ ಪ್ರಭಾವ ಬೀರಿದವರೆಂದರೆ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದರಂತಹ ದಾರ್ಶನಿಕರ ತತ್ವಗಳು ಕುವೆಂಪುರವರ ಮೇಲೆ ಗಾಢವಾಗಿ ಪ್ರಭಾವಬೀರಿ ಶ್ರೀ ರಾಮಾಯಣದಂತಹ ಹಳೆಯ ವಸ್ತುವನ್ನೇ ಆಯ್ದುಕೊಂಡು ಕಾವ್ಯ ಬರೆದು ಒಂದು ಮೂರ್ತ ಸ್ವರೂಪ ಪಡೆದಿದೆ. ರಾಮನ ಪಾದಸ್ಪರ್ಶದಿಂದ ಕಲ್ಲೂ ಕೂಡ ಮೂರ್ತಿಯಾಗುವಂತೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಪಾಶ್ಚಾತ್ಯ ಕವಿಗಳಾದ ಡಾಂಟೆ,ಹೋಮರ್, ವರ್ಜಿಲ್,ಮಿಲ್ಟನ್,ವರ್ಡ್ಸ್‌ವರ್ತ್,ಹಾಗೆಯೇ ಪಂಪ,ಕುಮಾರವ್ಯಾಸ,ಭಾಸ,ಭವಭೂತಿ,ಕಾಳಿದಾಸ ಜಗತ್ಪ್ರಸಿದ್ಧ ಕವಿಗಳಿಗೆ ಪ್ರಾರ್ಥನೆ ಸಲ್ಲಿಸಿ ಅವರ ಆಶೀರ್ವಾದ ನನ್ನ ಮೇಲಿರಲಿ ಎಂದು ಬೇಡುತ್ತಾರೆ.

ಕುವೆಂಪುರವರ ಶ್ರೀ ರಾಮಾಯಣ ದರ್ಶನಂನಲ್ಲಿ ರಾಮನು ತನ್ನ ದೈವತ್ವವನ್ನು ಕುಗ್ಗಿಸಿಕೊಂಡು ಮಾನವನಾಗಿಲ್ಲ. ಮಾನವನು ತನ್ನ ಸಾಧನೆ ಸದ್ಗುಣಗಳಿಂದ ದೈವತ್ವಕ್ಕೆ ಏರಿದ್ದಾನೆ ಎಂಬ ಕವಿ ರವೀಂದ್ರರ ಮಾತು ರಾಮಾಯಣ ದರ್ಶನಂನ ರಾಮನಿಗೂ ಅನ್ವಯವಾಗುವಂತದ್ದು. ಇಲ್ಲಿನ ಯಾವ ಪಾತ್ರಗಳು ಮಾನವ ಸಹಜ ಗುಣದೋಷಗಳಿಂದ ಮುಕ್ತವಾಗಿಲ್ಲ. ಸೀತಾವಿರಹದಿಂದ ರಾಮ ದು:ಖತಪ್ತ, ವಾಲಿಯ ವಧೆ ಮಾಡಿದ್ದಕ್ಕಾಗಿ ರಾಮ ಕ್ಷಮೆ ಯಾಚಿಸಿದ, ಸೀತೆ ಲಕ್ಷ್ಮಣನನ್ನು ನಿಂದಿಸಿ ಪಶ್ಚಾತಾಪ ಅನುಭವಿಸಿದಳು, ರಾಮನನ್ನು ಕಾಡಿಗಟ್ಟಲು ಕಾರಣವಾಗದೆ ವಿಧಿಯ ಕೈ ಕಾರಣವಾದ ಮಂಥರೆ ತನ್ನ ತಪ್ಪಿಗಾಗಿ ನೊಂದಳು, ಸೀತೆಗೆ ಅಗ್ನಿ ಪ್ರವೇಶ ಮಾಡೆಂದ ರಾಮ ತಾನೂ ಅವಳೊಂದಿಗೆ ಅಗ್ನಿಗಾಹುತಿಗೆ ಪ್ರಯತ್ನಿಸಿದ. ಹೀಗೆ ಇಲ್ಲಿನ ಪಾತ್ರಗಳೆಲ್ಲವೂ ಪಶ್ಚಾತಾಪದ ಮೂಸೆಯಲ್ಲಿ ಬೆಂದು ಪರಿಶುದ್ಧವಾಗಿವೆ ಎಂಬುದನ್ನು ಈ ಮಹಾಕಾವ್ಯದ ರಚನೆಯ ಅನುಭವದ ಸಂದರ್ಭದಲ್ಲಿ ಕಂಡು ಬರುತ್ತವೆ.

ಈ ಮಹಾಕಾವ್ಯದ ಒಡಲಿನಲ್ಲಿ ಈ ಶತಮಾನದ ಮೊದಲರ್ಧದ ಭಾರತೀಯ ಮನಸ್ಸು ಮಾತ್ರವೇ ಕೇಳಬಹುದಾದ ಮಹತ್ವದ ಪ್ರಶ್ನೆಗಳು ಅಂತರ್ಗತವಾಗಿಯೇ ಅಡಗಿವೆ. ಸಮಕಾಲೀನ ಪ್ರಶ್ನೆಗಳು ಹಾಗೂ ಪ್ರಾದೇಶಿಕ ಚಿತ್ರಗಳು ವಾಲ್ಮೀಕಿ ರಾಮಾಯಣವನ್ನು ಮಾನವತಾ ಯುಗದ ನಿತ್ಯ ರಾಮಾಯಣವನ್ನಾಗಿಸುತ್ತದೆ. ಹೀಗಾಗಿ ರಾಮ – ರಾವಣರ ಯುದ್ಧವು ರಾಮತತ್ವಕ್ಕೂ ಹಾಗೂ ರಾವಣತತ್ವಕ್ಕೂ ನಡೆದ ಮಹಾನ್ ಸಂಘರ್ಷವಾಗಿದೆ. ರಾಮ – ರಾವಣರ ರಣದ ಕೋಲಾಹಲದಲ್ಲಿ ಸೀತೆಯ ಸಂಕಟದ ದಳ್ಳುರಿಯ ಮರೆಯಲ್ಲಿ ಮಂಡೋದರಿ ಅದೃಶ್ಯಳಾದಂತೆ ತೋರುತ್ತದೆ. ಕಥಾನಾಯಕಿ ಸೀತೆಯ ಬಗ್ಗೆ

ಬಹು ಉದಾರವಾಗಿರುವ ಮಹರ್ಷಿಗಳ ಲೇಖನಿ ಪ್ರತಿ ನಾಯಕಿ ಮಂಡೋದರಿಯ ವಿಷಯದಲ್ಲಿ ಕೃಪಣವಾಗಿರುವಂತೆ ಸಹೃದಯರಿಗೆ ತೋರುತ್ತದೆ. ಮಂಡೋದರಿ ನಿಜಕ್ಕೂ ಪುಣ್ಯಶಾಲಿ. ಕವಿಯ ಔದಾರ್ಯದಿಂದಾಗಿ ಅವಳು ಮಹಾಪತಿವೃತೆಯಾಗಿದ್ದಾಳೆ. ಸಾಧಕಳಾಗಿ ಧರ್ಮ ದೇವತೆಯಾಗಿದ್ದಾಳೆ. ರಾವಣನ ಎಲ್ಲಾ ಸಾಧನೆಗೂ ಹಾಗೂ ಅವನ ' ವಿಜಯಕ್ಕೆ ಅವಳೇ ಕಾರಣಳಾಗುತ್ತಾಳೆ. ಸೀತೆಯು ಸಹ ' ಅವಳ ಪ್ರಭಾವದಿಂದ ಮಹಾನ್ ತಪಸ್ವಿಯಾಗಿದ್ದಾಳೆ. ಸೀತೆ – ಮಂಡೋದರಿಯರಿಬ್ಬರು ಈ ಮಹಾಕಾವ್ಯದ ಚಾಲಕ ಶಕ್ತಿಗಳು. ಸರ್ವರ ಉದ್ಧಾರವೇ ಮಂಡೋದರಿಯ ಅಪೇಕ್ಷೆ.

*ತಿಣುಕಿದನಂ ಫಣಿರಾಯ ರಾಮಾ*

*ಯಣದ ಕವಿಗಳ ಭಾರದಲಿ ತಿಂ*

*ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ*

ಎಂಬ ಕುಮಾರವ್ಯಾಸನ ಮಾತು ನೆನಪಿಗೆ ಬಂದು ಉದ್ಗಾರವೆತ್ತಿದ್ದಾನೆ. ಇದರಿಂದ ನಮಗೆ ತಿಳಿದು ಬರುವ ಸಂಗತಿಯೇನೆಂದರೆ ಇಪ್ಪತ್ತೊಂದನೇ ಶತಮಾನದಲ್ಲೂ ಶ್ರೀ ರಾಮಾಯಣ ದರ್ಶನಂ ಕಥೆ ಇನ್ನೂ ಸತ್ತಿಲ್ಲವೆಂದು ಮತ್ತು ಸೋಲುತ್ತಿಲ್ಲವೆಂದು ಗೊತ್ತಾಗುತ್ತದೆ. ವಿಶ್ವ ಮಾನವ ಸಂದೇಶವನ್ನು ಈ ಕಾವ್ಯದಲ್ಲಿ ಸಾರಿದ್ದಾರೆ. ಕುವೆಂಪುರವರು ಯಾವ ವ್ಯಕ್ತಿಯೂ ಪೂರ್ಣನಾಗಿ ಕೆಟ್ಟವನಲ್ಲ..,ಯಾವನೂ ಒಳ್ಳೆಯವನಲ್ಲ. ಪ್ರತಿಯೊಬ್ಬನ ಅಂತರಂಗದ ಗುಹೆಯಲ್ಲಿ ಒಳ್ಳೆಯತನವಿರುತ್ತದೆ. ಮನುಷ್ಯನಿಗೆ ಪ್ರೇಮತ್ವದ ಸಿದ್ಧಿ ದೊರೆತಾಗ ಮಾತ್ರ ಮನುಷ್ಯ ದೈವತ್ವವೇರಲು ಸಾಧ್ಯವೆಂಬುದನ್ನು ಕುವೆಂಪುರವರು ಸಾರಿದ್ದಾರೆ.

## *ಗ್ರಂಥಋಣ :-*

***1.ಶ್ರೀ ರಾಮಾಯಣ ದರ್ಶನಂ – ಕುವೆಂಪು.***

***2.ವಾಲ್ಮೀಕಿ ರಾಮಾಯಣ – ವೀ.ಸೀತಾರಾಮಯ್ಯ.***

***3.ಸಂಸ್ಕೃತಿ ಕಥನ – ಡಿ.ಆರ್.ನಾಗರಾಜ್.***